# ಸ್ವಾಮಿ ಭೂತೇಶಾನಂದ

## (೧೯೦೧-೧೯೯೮)

ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ**

ಅನುವಾದ: **ಕುಮಾರಿ ಪಿ. ಉಷಾ**

### ಭಾಗ-೩



**೧೨ ಜನವರಿ ೧೯೯೬, ಬೇಲೂರು ಮಠ**

**ನಾನು:** ಮಹಾರಾಜ್, ನಿಮಗೆ ಪ್ರಿಯವಾದ ಉಪನಿಷತ್ತಿನ ಶ್ಲೋಕ ಯಾವುದು?

**ಮಹಾರಾಜ್:** ನೀನು ನನ್ನನ್ನು ಕಷ್ಟಕ್ಕೆ ಸಿಲುಕಿಸಿದೆ.

ಬಳಿಕ ಅವರು ಬೃಹದಾರಣ್ಯಕ ಉಪನಿಷತ್ತಿನ **'ಆತ್ಮಾನಂ ಚೇದ್ವಿಜಾನೀಯಾದಯಮಸ್ಮೀತಿ ಪೂರುಷಃ। ಕಿಮಿಚ್ಛನ್ ಕಸ್ಯ ಕಾಮಾಯ ಶರೀರಮನುಸಂಜ್ವರೇತ್ ॥'**(ಪುರುಷನು ಪರಮಾತ್ಮನನ್ನು 'ಇವನೇ ನಾನು' ಎಂದು ಅರಿತುಕೊಂಡರೆ ಯಾವುದನ್ನು ಬಯಸುತ್ತ, ಯಾವ ಪ್ರಯೋಜನಕ್ಕಾಗಿ ಶರೀರದ ರೋಗವನ್ನು ಅನುಸರಿಸಿ ದುಃಖಪಡುವನು?) *(೪.೪.೧೨)* ಎಂಬ ಶ್ಲೋಕವನ್ನು ಹೇಳಿದರು. ಅವರು ಇದನ್ನು ತಮ್ಮ ಸ್ವಂತ ಅನುಭವದಿಂದ ಹೇಳುತ್ತಿರುವರೆಂದು ನನಗನ್ನಿಸಿತು.

**೩೧ ಜನವರಿ ೧೯೯೬, ಬೇಲೂರು ಮಠ**

**ನಾನು:** ಭಗವಂತನು ಭಕ್ತರನ್ನು ಎಷ್ಟು ಪ್ರೀತಿಸುತ್ತಾನೆ ಎಂಬುದರ ಉಲ್ಲೇಖ ಎಲ್ಲಿಯಾದರೂ ಉಂಟೆ? ಹೇಳಿ. ಗೋಪಿಯರು ಕೃಷ್ಣನನ್ನು ಎಷ್ಟು ಪ್ರೀತಿಸುತ್ತಿದ್ದರೆಂಬುದನ್ನು ಭಾಗವತದಲ್ಲಿ ಉಲ್ಲೇಖಿಸಲಾಗಿದೆ. ಆದರೆ ಕೃಷ್ಣನು ಗೋಪಿಯರನ್ನು ಎಷ್ಟು ಪ್ರೀತಿಸುತ್ತಿದ್ದನೆಂದು ಎಲ್ಲಾದರೂ ಉಲ್ಲೇಖವಿದೆಯೆ?

**ಮಹಾರಾಜ್:** ಹೌದು. ಭಾಗವತದಲ್ಲಿ ಇದರ ಇಂಗಿತವಿದೆ.

(ಒಂದು ಶ್ಲೋಕವನ್ನು ಹೇಳಿದರು. ಅದು ನನಗೆ ನೆನಪಿಲ್ಲ.)

**ನಾನು:** ಠಾಕೂರರು ನಮ್ಮ ಬಗ್ಗೆ ಚಿಂತಿಸುತ್ತಾರೆಯೆ?

**ಮಹಾರಾಜ್:** ಅವರೇನಾದರೂ ನಮ್ಮ ಬಗ್ಗೆ ಚಿಂತಿಸದಿದ್ದರೆ ನಾವೆಲ್ಲಿಗೆ ಹೋಗೋಣ? ಅವರು ನಮ್ಮ ಮಂಗಳವನ್ನು ಕೋರದಿದ್ದರೆ, ನಮಗೆ ಯಾವ ಗತಿಯೂ ಇಲ್ಲ.

ಅವರ ದೃಢ ವಿಶ್ವಾಸ ಹಾಗೂ ಶರಣಾಗತಿ ನನ್ನನ್ನು ಮುಗ್ಧಗೊಳಿಸಿದುವು.

**ಮಹಾರಾಜ್:** ಮಲಗಿದರೆ ನಿದ್ರೆ ಬರುವುದಿಲ್ಲ. ಆಗ, ಇನ್ನು ಬದುಕಿ ಪ್ರಯೋಜನವೇನು, ಎನಿಸುತ್ತದೆ.

**ನಾನು:** ಅದು ನಿಮ್ಮ ಕೈಯಲ್ಲಿಲ್ಲ.

**ಮಹಾರಾಜ್:** ಡಿಪೆಂಡೆಂಟ್ ಆಗಿಬಿಟ್ಟಿದ್ದೇನೆ. ಸಾಧು ಜೀವನಕ್ಕೆ ಇದು ಒಳ್ಳೆಯದಲ್ಲ. ಸ್ವಾಧೀನತೆಯಿಲ್ಲದ ಜೀವನವನ್ನು ಯಾರು ತಾನೇ ಇಷ್ಟಪಡುತ್ತಾರೆ? ದಾಸ್ಯತ್ವದ ಶೃಂಖಲೆಯನ್ನು ಯಾರು ತಾನೇ ತೊಡುವರು?

**ಮಹಾರಾಜ್:** ಒಬ್ಬ ಭಕ್ತನು ಬಂದು, ''ಮನಸ್ಸಿನಲ್ಲಿ ತುಂಬಾ ಅಶಾಂತಿ, ಶಾಂತಿಯನ್ನು ಪಡೆಯುವುದು ಹೇಗೆ?'' ಎಂದು ಕೇಳಿದರು. ''ಸುಲಭವಾದ ಒಂದು ಮಾರ್ಗವಿದೆ'' ಎಂದೆ. ಭಕ್ತನು ''ಅದೇನು?'' ಎಂದು ಕೇಳಿದ. ನಾನೆಂದೆ, ''ಆಸೆಗಳನ್ನು ತೊರೆ.'' ಭಕ್ತನೆಂದ, ''ನಾವು ಸಂಸಾರಿಗಳು. ಆಸೆಗಳನ್ನು ಬಿಡುವುದು ಹೇಗೆ? ಅದು ಅಸಾಧ್ಯ'' ''ಹಾಗಾದರೆ ಅಶಾಂತಿಯಲ್ಲಿಯೇ ಇರು. ಒಂದೇ ದಾರಿ — ವಾಸನಾತ್ಯಾಗ. ಅದು ಸಾಧ್ಯವಾಗದಿದ್ದರೆ, ಅಶಾಂತಿ ಹೋಗುವುದಿಲ್ಲ. ''ಅನಿತ್ಯಂ ಅಸುಖಂ ಲೋಕಮಿಮಂ ಪ್ರಾಪ್ಯ ಭಜಸ್ವ ಮಾಮ್।'' *(ಗೀತೆ, ೯.೩೩).*

'ಶ್ರೀರಾಮಕೃಷ್ಣ ಲೀಲಾಪ್ರಸಂಗ'ವನ್ನು ಕುರಿತು ಅನೇಕ ಪ್ರಶ್ನೆಗಳನ್ನು ಹಿಂದೆಯೇ ಪತ್ರಮುಖೇನ ಕೇಳಿದ್ದೆ. ಆದರೆ ಒಂದು ವಿಷಯದ ಬಗ್ಗೆ ಅವರು ನೀಡಿದ ಉತ್ತರದಿಂದ ನನ್ನ ಸಂಶಯ ದೂರವಾಗಲಿಲ್ಲ. ಅದೇನೆಂದರೆ, ಚಂದ್ರಮಣಿ ದೇವಿಯು ಮಂತ್ರವಾದಿಯ ಸಹಾಯದಿಂದ ಠಾಕೂರರನ್ನು ಹಿಡಿದಿದ್ದ 'ಭೂತ'ವನ್ನು ಬಿಡಿಸಿದರು, ಎಂಬುದು. 'ಚಂಡ' (ಬಂಗಾಳಿಯಲ್ಲಿ) ಎಂದರೆ 'ಭೂತ' ಎಂದು ಬರೆದಿದ್ದರು. ಪುಸ್ತಕದಲ್ಲೂ ಅದೇ ರೀತಿ ಇದೆ. ಮಹಾರಾಜರಿಗೆ ನಾನು ಹೇಳಿದೆ ಕ್ರಿಸ್ಟೋಫರ್ ಇಷರ್‌ವುಡ್ ಚಂಡ' ಎಂದರೆ 'medium' ಎಂದಿದ್ದಾರೆ, ಏಕೆಂದರೆ, ಭೂತವು ಮಾತನಾಡುವುದಿಲ್ಲ. ಆದರೆ 'ಚಂಡ' ಠಾಕೂರರನ್ನುದ್ದೇಶಿಸಿ 'ಏಯ್ ಗದಾಯ್, ನೀನು ಅಷ್ಟೊಂದು ಅಡಿಕೆಗಳನ್ನು ತಿನ್ನುತ್ತೀಯೇಕೆ?' ಎಂದು ಕೇಳುತ್ತದೆ. ಮಹಾರಾಜ್ ನಗುತ್ತ ಹೇಳಿದರು, ''ಅದೊಂದು ಕಣ್ಣುಕಟ್ಟು ಅಷ್ಟೆ. ಕಾಮಾರಪುಕುರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಜನರು ಇಂಥದನ್ನು ನಂಬುತ್ತಿದ್ದರು. ಆ ಪ್ರದೇಶದಲ್ಲೆಲ್ಲ ಎರಡಂತಸ್ತಿನ ಮಣ್ಣಿನ ಮನೆಗಳು. ಒಬ್ಬ 'ಭೂತ' ಹಿಡಿದವನು ಮೊದಲೇ ಅಟ್ಟವನ್ನು ಹತ್ತಿ ಕುಳಿತಿರುತ್ತಿದ್ದ. ನಂತರ ಮಂತ್ರವಾದಿಯು ಮಂತ್ರವನ್ನು ಹೇಳಿ ಪ್ರಶ್ನೆ ಕೇಳಿದರೆ, ಮೇಲಿದ್ದ 'ಭೂತ'ವು ನಿಧಾನವಾಗಿ ಮೆಲುದನಿಯಲ್ಲಿ ಉತ್ತರಿಸುತ್ತಾನೆ. ಒಂದು ಸಲ 'ಭೂತ' ಹಿಡಿದವನು ಮೇಲ್ಗಡೆ ಕತ್ತಲಿನಲ್ಲಿ ಕುಳಿತಿದ್ದಾನೆ. ಮತ್ತೊಬ್ಬ 'ಭೂತ' ಈ 'ಭೂತ'ವನ್ನು ಮುಟ್ಟಿದಾಕ್ಷಣವೆ ಅವನು ಗಟ್ಟಿಯಾಗಿ ಕಿರುಚಲಾರಂಭಿಸಿದ. ನಂತರ ಇಬ್ಬರೂ ಭಯದಿಂದ ಕೆಳಗೆ ಬಿದ್ದರು!'' ನಾವಿಬ್ಬರೂ ತುಂಬ ನಕ್ಕೆವು. 'ಭೂತ ಬಿಡಿಸುವುದು' ಎಂದರೇನೆಂದು ನನಗೆ ಅರ್ಥವಾಯಿತು.

**೭.೮.೧೯೬೭, ಬೇಲೂರು ಮಠ, ಬೆಳಿಗ್ಗೆ ೭ ಘಂಟೆ**

ರಾತ್ರಿ ಮಹಾರಾಜರಿಗೆ ಉಸಿರಾಟದ ತೊಂದರೆಯಾಗಿದ್ದು ಅವರಿಗೆ ಆಮ್ಲಜನಕ ಕೊಡಬೇಕಾಗಿಬಂತೆಂದು ಸೇವಕರಿಂದ ಕೇಳಿದೆ. ಆದರೂ ಅವರು ನಗುಮೊಗದಿಂದಲೆ ಸಾಧುಗಳಿಗೆ ದರ್ಶನವನ್ನು ಕೊಟ್ಟರು.

**ನಾನು:** ಸಾಧು ಜೀವನದಲ್ಲಿ ಮಾಡಬೇಕಾದದ್ದೇನು?

**ಮಹಾರಾಜ್:** ಅದು 'ಪ್ರೇಷ ಮಂತ್ರ'ದಲ್ಲಿದೆ. ಸರ್ವತ್ಯಾಗ ಮಾಡಬೇಕು. ಇದೆ ಮೊದಲನೆಯದು. ಎರಡನೆಯದೇನೆಂದರೆ, ಎಲ್ಲವನ್ನೂ ಭಗವಂತನಿಗೆ ಸಮರ್ಪಿಸಬೇಕು. ಮೊದಲನೆಯದು ನಕಾರಾತ್ಮಕ, ನಂತರದ್ದು ಸಕಾರಾತ್ಮಕ – ಎಲ್ಲವನ್ನೂ ಆತನಿಗೆ ಸಮರ್ಪಿಸಬೇಕೆಂಬುದು.

**ನಾನು:** ಪಾಶ್ಚಾತ್ಯರು 'renunciation' (ತ್ಯಾಗ) ಎಂಬ ಪದವನ್ನು ಕೇಳಿದರೆ ಹೆದರುತ್ತಾರೆ. ಇದು ನಕಾರಾತ್ಮಕ ಎಂಬುದು ಅವರ ಭಾವನೆ.

**ಮಹಾರಾಜ್:** ಭೋಗಾಸಕ್ತಿ ಇದ್ದಷ್ಟು ಸಮಯ ತ್ಯಾಗವು ಭಯಾನಕವಾಗಿ ತೋರುವುದು. ಭೋಗಾಸಕ್ತಿ ಹೊರಟು ಹೋದರೆ ತ್ಯಾಗ ಮಾಡಲು ಯಾರೂ ಹೆದರುವುದಿಲ್ಲ. ಇದು ಸ್ವಾಭಾವಿಕ. ಎಲ್ಲವನ್ನೂ ಆತನಿಗೆ ಸಮರ್ಪಿಸುವುದೇ ಇದಕ್ಕೆ ಉಪಾಯ.

**ನಾನು:** ಅದು ಹೇಗೆ ಸಾಧ್ಯ ?

**ಮಹಾರಾಜ್:** 'ಅಹಂಕಾರ'ವನ್ನು ತ್ಯಜಿಸಬೇಕು. ಮನಸ್ಸಿನಿಂದ 'ಅಹಂ' ತ್ಯಾಗ ಮಾಡಿ ಅಲ್ಲಿ ಈಶ್ವರನನ್ನಿರಿಸು. ಅಹಂಕಾರ ತ್ಯಜಿಸಬೇಕಾದುದು ನಿನ್ನ ಕೆಲಸ. ಆತನನ್ನು ಅಲ್ಲಿ ಕುಳ್ಳಿರಿಸುವ ಅಗತ್ಯವಿಲ್ಲ – ಅವನು ಸರ್ವದಾ ಅಲ್ಲಿ ನೆಲೆಸಿದ್ದಾನೆ.

**ನಾನು:** ಮನೋನಾಶ, ವಾಸನಾಕ್ಷಯ ಹಾಗೂ ತತ್ತ್ವಜ್ಞಾನ ಜೊತೆಜೊತೆಗೆ ಆಗುತ್ತವೆ ಎಂದು 'ಯೋಗವಾಸಿಷ್ಠ'ದಲ್ಲಿ ಹೇಳಲಾಗಿದೆಯೆಂದು ಹರಿ ಮಹಾರಾಜರು ಹೇಳುತ್ತಾರೆ. ಅದು ಹೇಗೆ ಸಾಧ್ಯ?

**ಮಹಾರಾಜ್:** **'ಆತ್ಮಾ ವಾ ಅರೇ ದ್ರಷ್ಟವ್ಯಃ ಶ್ರೋತವ್ಯೋ ನಿಧಿಧ್ಯಾಸಿತವ್ಯಃ'** *(ಬೃಹದಾರಣ್ಯಕ ಉಪನಿಷತ್ತು ೨.೪.೫.).* ಮನನದಿಂದ ಸಾಧ್ಯ. ಬಳಿಕ ಇಚ್ಛೆ. ಇಷ್ಟಲಾಭಕ್ಕೆ ಪ್ರತಿಕೂಲವಾದ ವಿಷಯವಾಸನೆಗಳನ್ನು ಮನನದಿಂದ ತ್ಯಜಿಸಲು ಸಾಧ್ಯ. ಆಗ ಸ್ವಾಭಾವಿಕವಾಗಿಯೇ ಮನುಷ್ಯನಿಗೆ ಮುಕ್ತಿ ದೊರೆಯುತ್ತದೆ... 'ಆತ್ಮ'ವನ್ನು ಮನನ ಮಾಡಿದರೆ ಏಷಣಾತ್ರಯಗಳು (ಲೋಕೈಷಣ, ಪುತ್ರೈಷಣ, ವಿತ್ತೈಷಣ) ಕ್ಷಯವಾಗುತ್ತದೆ. ಅದಾಯಿತೆಂದರೆ ತತ್ತ್ವಜ್ಞಾನ. ಮೂರು ಒಂದಾದ ಮೇಲೆ ಒಂದು ಎಂದಲ್ಲ–ಇವೆಲ್ಲ ಒಂದೆ. ಬೆಳಕು ಬರುತ್ತದೆ, ಕತ್ತಲು ಹೋಗುತ್ತದೆ.

**ನಾನು:** ವಾಸನೆ–ಇಚ್ಛೆಗಳು ಕ್ಷಯವಾಗದಿದ್ದರೆ, ಮನೋನಾಶ ಆಗುವುದಿಲ್ಲ. ಯಾವುದು ಮೊದಲು?

**ಮಹಾರಾಜ್:** ವಾಸನಾಕ್ಷಯ ಹಾಗೂ ಮನೋನಾಶ – ನಾಣ್ಯದ ಎರಡು ಮುಖಗಳು. ಮುಂದೆ–ಹಿಂದೆ ಎಂದೇನೂ ಇಲ್ಲ. ಎರಡೂ ಜೊತೆಜೊತೆಗೆ.

**ನಾನು:** ಬೌದ್ಧರ 'ವಿಪಸ್ಸನಾ' ಧ್ಯಾನ ಎಂದರೇನು?

**ಮಹಾರಾಜ್:** **'ಸರ್ವಂ ಕ್ಷಣಿಕಂ, ದುಃಖಂ ತ್ಯಾಜ್ಯಮ್'** ದುಃಖ ನಿವೃತ್ತಿಗಾಗಿ ಆರ್ಯಸತ್ಯ ಚತುಷ್ಟಯವನ್ನು ಅವಲಂಬಿಸಬೇಕು. ಝೆನ್ ಬೌದ್ಧರು ಇದಕ್ಕೆ 'ಸತತ ಜಾಗರೂಕತೆ' ಎನ್ನುತ್ತಾರೆ. ಯಾವುದೇ ಕೆಲಸವನ್ನು ಅಥವಾ ಚಿಂತನೆ ಮಾಡುವಾಗ ನೀನು ಸದಾ ಎಚ್ಚರವಾಗಿರಬೇಕು. ಎಚ್ಚರಿಕೆ – ಏನೇ ಮಾಡಲಿ, ಸಂಪೂರ್ಣ ಮನಸ್ಸಿನಿಂದ ಮಾಡಬೇಕು. ಆಂಶಿಕ ಮನಸ್ಸಿನಿಂದಲ್ಲ. ಏನೇ ಮಾಡುವಾಗಲೂ ಅದನ್ನು ಸರ್ವಾಂತಃಕರಣದಿಂದ ಮಾಡಿದ್ದೇ ಆದರೆ ವಿಕ್ಷೇಪಗಳು ಉಂಟಾಗುವುದಿಲ್ಲ. ಆಗ ಸತ್ಯವು ಪ್ರತಿಭಾಸಿತವಾಗುತ್ತದೆ. ಶೂನ್ಯವೇ ಬೌದ್ಧರ ಲಕ್ಷ್ಯ. ಮಧ್ಯ ಪಥದವರ ಮತದಲ್ಲಿ 'ಶೂನ್ಯ' ಎಂದರೆ ಖಾಲಿ ಎಂದಾ

ಗಿರದೆ, ವಿಕ್ಷೇಪರಹಿತವಾದುದು ಅಥವ 'ಸತ್ಯದ ಎಚ್ಚರ' ಎಂದರ್ಥ. ಒಬ್ಬಾತ ಎರಡು ವರ್ಷಗಳಿಂದ ಪಾತ್ರೆ ತೊಳೆಯು ತ್ತಿದ್ದಾನೆ. ಅವನಿಗನ್ನಿಸಿತು – ನಾನು ಪಾತ್ರೆಗಳನ್ನು ತೊಳೆಯು ವಾಗ ಇತರ ವಿಚಾರಗಳನ್ನೂ ಮಾಡುತ್ತೇನೆ. ಇದನ್ನು ಅವನು ತನ್ನ ಗುರುವಿಗೆ ಹೇಳಿದಾಗ ಅವರೆಂದರು, ''ಸಂಪೂರ್ಣ ಮನಸ್ಸಿನಿಂದ ಪಾತ್ರೆಯನ್ನು ತೊಳೆದರೆ ಇಡೀ ವಿಶ್ವದ ರಹಸ್ಯವು ನಿನ್ನೆದುರು ಸ್ಪಷ್ಟವಾಗುತ್ತದೆ.'' ಕರ್ಮಯೋಗ ಕುರಿತು ಸ್ವಾಮೀಜಿ ಹೇಳುತ್ತಾರೆ: ''ನಾನೇನಾದರೂ ಸಂಪೂರ್ಣ ಮನಸ್ಸಿನಿಂದ ಕರ್ಮವನ್ನು ಮಾಡಿದರೆ ನಮ್ಮ ಮನಸ್ಸಿನ ಚಂಚಲತೆ ದೂರವಾಗುತ್ತದೆ. ಚಂಚಲತೆ ದೂರವಾಯಿತೆಂದರೆ ಅದರ ಹಿನ್ನೆಲೆಯ ಅಸ್ತಿತ್ವ ಅರ್ಥಾತ್ 'ಆತ್ಮ'ವು ಪ್ರಕಾಶಿತವಾಗುತ್ತದೆ.''

**ನಾನು:** ಗೀತೆಯಲ್ಲಿ ಹೇಳಿರುವ 'ಕರ್ಮಯೋಗ'ಕ್ಕೂ, ಸ್ವಾಮೀಜಿಯವರ 'ಕರ್ಮಯೋಗ'ಕ್ಕೂ ವ್ಯತ್ಯಾಸವುಂಟೆ?

**ಮಹಾರಾಜ್:** ಗೀತೆಯ 'ಫಲಾರ್ಪಣ' ಮತ್ತು ಸ್ವಾಮೀಜಿಯವರ 'ಫಲಾಕಾಂಕ್ಷೆಯ ವರ್ಜನೆ' ಒಂದೇ – ಒಂದೇ ಸತ್ಯದ ಎರಡು ಪಾರ್ಶ್ವಗಳು. 'ಕರ್ಮಫಲವನ್ನೆಲ್ಲ ಭಗವಂತನಿಗೆ ಅರ್ಪಿಸು' ಎಂದು ಗೀತೆಯಲ್ಲಿ ಹೇಳಲಾಗಿದೆ. ಸ್ವಾಮೀಜಿಯವರು ನಿಃಸ್ವಾರ್ಥತೆಯಿಂದ ಕರ್ಮವನ್ನು ಮಾಡಬೇಕೆಂದು ಹೇಳಿದ್ದಾರೆ. ಯಾವುದೇ ಫಲವನ್ನು ಇಚ್ಛಿಸದೆ ಕರ್ಮವನ್ನು ಮಾಡು. ಕರ್ಮಗಳು ಮನಸ್ಸಿನಲ್ಲಿ ವಿಕ್ಷೇಪಗಳನ್ನುಂಟುಮಾಡುವುವು. ಕಾರಣ, ನಾವು ಅದು–ಇದು ಬೇಕೆಂದು ಅವುಗಳ ಹಿಂದೆ ಓಡುತ್ತೇವೆ. ಸ್ವಾಮೀಜಿ ಹಾಗೂ ಬುದ್ಧನ 'ಕರ್ಮಯೋಗದಲ್ಲಿ' ಹೆಚ್ಚಿನ ವ್ಯತ್ಯಾಸವಿಲ್ಲ. ಬಂಧನದಿಂದ ಮುಕ್ತಿಯನ್ನು ಪಡೆಯಬೇಕಾದರೆ ಸಂಪೂರ್ಣ ಮನಸ್ಸಿನಿಂದ ಕರ್ಮವನ್ನು ಮಾಡು. ಇದರಿಂದ ಮನಸ್ಸಿನ ವಿಕ್ಷೇಪಗಳು ದೂರವಾಗಿ ಸತ್ಯವು ಪ್ರಕಾಶಿಸುತ್ತದೆ. ಸತ್ಯದ ಬೆಳಕು ಸ್ವತಃಸಿದ್ಧ. ಆವರಣವನ್ನು ಸರಿಸುವುದಷ್ಟೇ ಅಧ್ಯಾತ್ಮ ಜೀವನವೆನ್ನುವುದು. ಮತ್ತಿನ್ನೇನೂ ಮಾಡಬೇಕಾಗಿಲ್ಲ. ಇದೇ ಕರ್ಮಯೋಗದ ಉದ್ದೇಶ.

ಶಂಕರರ ಮತದಲ್ಲಿ ಕರ್ಮಯೋಗದಿಂದ ಚಿತ್ತಶುದ್ಧಿಯುಂಟಾಗಿ ತದನಂತರ ಜ್ಞಾನಲಾಭವಾಗುವುದು. ಆದರೆ ಇವೆರಡರ ನಡುವೆ ಉಪಾಸನಾ ಯೋಗವನ್ನು ಹೇಳಿರುವರು. ಇದೇನೂ ಬೇಕಾಗಿರಲಿಲ್ಲ. ಏಕೆಂದರೆ 'ಬ್ರಹ್ಮ'ವು ಸ್ವಯಂಪ್ರಕಾಶವಾಗಿದೆ. ಬ್ರಹ್ಮವನ್ನು ಯಾರೂ ಪ್ರಕಾಶಿಸಪಡಿಸಲಾಗದು. ನಿಷ್ಕಾಮಕರ್ಮದಿಂದ ವಿಘ್ನಗಳನ್ನು ಸರಿಸಿದರೆ ಜ್ಞಾನವನ್ನು ಪಡೆಯಬಹುದು. ಶಂಕರರ ಮತದಲ್ಲಿ ಜ್ಞಾನದಿಂದ ಮಾತ್ರವೇ ಅಜ್ಞಾನದ ನಿರ್ಮೂಲನೆಯಾಗುವುದು. ಆದ್ದರಿಂದ ಅವರು ನಡುವೆ 'ಬ್ರಹ್ಮಾಕಾರ ವೃತ್ತಿ'ಯನ್ನು ಸೇರಿಸಿರುವರು. ಈ ವೃತ್ತಿಯು ಅಜ್ಞಾನ ವೃತ್ತಿಯನ್ನು ಅಳಿಸುತ್ತದೆ. ಸ್ವಾಮೀಜಿ ಹೇಳುವಂತೆ, ಅಜ್ಞಾನ ವೃತ್ತಿಯು ಸರಿದುಹೋಯಿತೆಂದರೆ ಮತ್ತೆ ಉಳಿಯುವುದಾದರೂ ಏನು? 'ಬ್ರಹ್ಮ'ವಾದರೋ ಸ್ವಯಂಪ್ರಕಾಶಮಾನವಾದುದು.

**೮.೮.೧೯೭೭, ಬೇಲೂರು ಮಠ, ಬೆಳಗ್ಗೆ ೭ ಗಂಟೆ**

**ನಾನು:** ಆಧ್ಯಾತ್ಮಿಕ ಅನುಭೂತಿ ನಿಜವೋ ಸುಳ್ಳೋ ಎಂದು ಹೇಗೆ ತಿಳಿಯುತ್ತದೆ?

**ಮಹಾರಾಜ್:** ಎರಡು ರೀತಿಗಳಲ್ಲಿ ತಿಳಿಯಬಹುದು. ಮೊದಲನೆಯದಾಗಿ, ಸ್ವಸಂವೇದ್ಯ – ಅಂದರೆ ಸ್ವತಃ ಅನುಭವವನ್ನು ಪಡೆದವನಿಗೆ ತಿಳಿಯುತ್ತದೆ. ಎರಡನೆಯದಾಗಿ, ಪರಸಂವೇದ್ಯ, ಅಂದರೆ ಇತರರ ಅಭಿಪ್ರಾಯದಿಂದ. ಈ ಅನುಭವದ ದೃಷ್ಟಾಂತವು ಗೀತೆಯ 'ಸ್ಥಿತಪ್ರಜ್ಞನ ಲಕ್ಷಣ'ಗಳಲ್ಲಿ ಹೇಳಲಾಗಿದೆ. ಈ ಲಕ್ಷಣಗಳನ್ನು ನಿನ್ನ ಅನುಭವಗಳೊಂದಿಗೆ ಹೋಲಿಸಿದರೆ ತಿಳಿಯುತ್ತದೆ – ನಿಜವೋ ಸುಳ್ಳೋ ಎಂದು. ಇವುಗಳು ಸ್ಪಷ್ಟವಾಗಿ ತಿಳಿಯುವ ಲಕ್ಷಣಗಳು. 'ಭಾಗವತ'ದಲ್ಲಿ ಈ ಮೂರು ಲಕ್ಷಣಗಳನ್ನು ಹೇಳಲಾಗಿದೆ : (೧) ಭಗವಂತನಲ್ಲಿ ನಿನ್ನ ಭಕ್ತಿ ಹೆಚ್ಚುತ್ತದೆ. (೨) ಇಂದ್ರಿಯ ವಿಷಯಗಳಿಂದ ನಿನ್ನ ಮನಸ್ಸು ಮುಕ್ತವಾಗುತ್ತದೆ. (೩) 'ಸತ್ಯ'ದ ಕುರಿತು ನಿನಗೆ ದೃಢವಿಶ್ವಾಸವುಂಟಾಗುತ್ತದೆ, ಹಾಗೂ ಭಗವಂತನ ಕುರಿತು ನಿನ್ನ ಮನಸ್ಸಿನಲ್ಲಿ ಯಾವುದೇ ಗೊಂದಲ, ಸಂದೇಹ ಉಳಿಯುವುದಿಲ್ಲ. **'ಭಕ್ತಿಃ ಪರೇಶಾನಭವೋ ವಿರಕ್ತಿರನ್ಯತ್ರ ಚೈಷ ತ್ರಿಕ ಏಕಕಾಲಃ । ಪ್ರಪದ್ಯಮಾನಸ್ಯ ಯಥಾಶ್ನತಃ ಸ್ಯುಸ್ತುಷ್ಟಿಃ ಪುಷ್ಟಿಃ ಕ್ಷುದಪಯೋಽನುಘಾಸಮ್॥** *(ಭಾಗವತ ೧೧.೨.೪೨)* ಹಸಿದ ವ್ಯಕ್ತಿಯ ಮನಸ್ಸಿಗೆ ಶಾಂತಿಯಿರುವುದಿಲ್ಲ. ಅವನ ಶರೀರ ದುರ್ಬಲವಾಗಿರುತ್ತದೆ. ತೀವ್ರವಾಗಿ ಹಸಿದವನಿಗೆ ಭೋಜನ ನೀಡಿದಾಗ ಅವನು ಪ್ರತಿಯೊಂದು ತುತ್ತಿನಿಂದಲೂ ತುಷ್ಟನಾಗುತ್ತಾನೆ. ಶರೀರವು ಶಕ್ತಿಯುತವಾಗುತ್ತದೆ. ಮನಸ್ಸು ಶಾಂತವಾಗುತ್ತದೆ, ಹಸಿವಿನ ಬಾಧೆ ದೂರವಾಗುತ್ತದೆ. ಈ ಮೂರು ಲಕ್ಷಣಗಳಿಂದ ಈ ಅನುಭವದ ಬಗ್ಗೆ ನಿರ್ಧರಿಸಬಹುದು : ಸತ್ಯದರ್ಶನದಿಂದ ಅವನ ಮನಸ್ಸಿಗೆ ಸಂತೋಷವುಂಟಾದರೆ, ಅವನು ಆಧ್ಯಾತ್ಮಿಕ ಶಕ್ತಿಯನ್ನನುಭವಿಸಿದರೆ ಹಾಗೂ ಭಗವಂತನ ಕುರಿತು ಎಲ್ಲ ಸಂದೇಹಗಳೂ ದೂರವಾದರೆ, ಆಗ ಅವನಿಗಾದ ದರ್ಶನ ಅಥವ ಅನುಭೂತಿ ನಿಜವಾದುದು ಎಂದು ಹೇಳಬಹುದು. 'ಪರಸಂವೇದ್ಯ' ಎಂದರೆ, ಇತರರಿಂದ ನಿನ್ನ ದರ್ಶನದ ಮೌಲ್ಯಮಾಪನವನ್ನು ಮಾಡಬೇಕು. ಆದರೆ ಇದರಲ್ಲಿ ಸಂದೇಹಕ್ಕೆ ಅವಕಾಶವಿರಬಹುದು. ಯಾವುದೇ ವ್ಯಕ್ತಿಯು ಆಧ್ಯಾತ್ಮಿಕ ಅನುಭೂತಿಯ ಅಥವಾ ದರ್ಶನದ ನಟನೆ ಮಾಡಬಹುದು. ಅದು ಬರಿಯ ತೋರಿಕೆಯಾಗಿರಬಹುದು. ಆದರೆ ಅದು ಸತ್ಯವಲ್ಲವೆಂದು ಅವನು ಸ್ವತಃ ತಿಳಿದಿರುತ್ತಾನೆ. ಗೀತೆಯ ದ್ವಿತೀಯ ಅಧ್ಯಾಯದಲ್ಲಿ ಬರುವ ಸ್ಥಿತಪ್ರಜ್ಞನ ಲಕ್ಷಣಗಳು ಹಾಗೂ ೧೩ನೆಯ ಅಧ್ಯಾಯದಲ್ಲಿ ಹೇಳಿರುವ ಅಹಿಂಸೆ, ಕ್ಷಾಂತಿ, ಆರ್ಜವ ಮುಂತಾದ ಗುಣಗಳು ಆಭ್ರಾಂತ ಲಕ್ಷಣಗಳು.

**ನಾನು:** ಇತ್ತೀಚೆಗೆ ಅನೇಕ ಪಾಶ್ಚಾತ್ಯರಿಂದ ತಮಗೆ 'ಕುಂಡಲಿನಿ'ಯು ಜಾಗೃತವಾದ ಅನುಭೂತಿಗಳಾಗಿವೆಯೆಂದು ಕೇಳುತ್ತೇವೆ. ಇದರ ಬಗ್ಗೆ ನೀವೇನು ಹೇಳುತ್ತೀರಿ?

**ಮಹಾರಾಜ್:** 'ಕುಂಡಲಿನಿ' ಎಂದರೇನೆಂಬುದನ್ನು ತಿಳಿದ ಜನರು ಅತಿ ವಿರಳ. ವಾಸನೆಗಳು ಜಾಗೃತವಾದರೆ ಅದು ಕುಂಡ ಲಿನಿಯ ಜಾಗೃತಿ ಎಂದುಕೊಳ್ಳುತ್ತಾರೆ. 'ವಚನವೇದ' ವನ್ನೋದಿ ತಮ್ಮ ಕುಂಡಲಿನಿಯೂ ಎಚ್ಚೆತ್ತಿದೆ ಎಂದು ತಿಳಿಯುತ್ತಾರೆ. ಒಬ್ಬರು ನನಗೆ ಹೀಗೆ ಹೇಳಿದ್ದರು. ನಾನು, ''ಹೃದಯದ ಅಧಿಕ ಒತ್ತಡ ಇರಬಹುದು, ವೈದ್ಯರಿಗೆ ತೋರಿಸಿ'' ಎಂದೆ.

**ನಾನು:** ಭಗವಂತನಿಂದ ಆದೇಶ ಪಡೆಯುವುದು ಸಾಧ್ಯವೆ?

**ಮಹಾರಾಜ್:** ಇದನ್ನು ಮೂರು ದೃಷ್ಟಿಕೋನಗಳಿಂದ ನೋಡಬಹುದು: ೧) ಸ್ವಂತ ಅನುಭವ, ೨) ಸ್ವಂತ ಅನುಭವ ವನ್ನು ಶಾಸ್ತ್ರದೊಂದಿಗೆ ಹೋಲಿಸುವುದು ೩) ಸಂಶಯ ನಿವಾ ರಣೆ. ಈ ರೀತಿಯಾಗಿ, ಆದೇಶವು ಭ್ರಾಂತಿಯೋ ಅಥವ ನಿಜವೋ ಎಂದು ಪರೀಕ್ಷಿಸಬೇಕು. ಬಗೆಬಗೆಯ ಇಚ್ಛೆಗಳು ಮೇಲೇಳುತ್ತವೆ – ಈಶ್ವರನ ಇಚ್ಛೆಯೆಂದು ತೋರುತ್ತದೆ.

**೯.೮.೧೯೭೭, ಬೇಲೂರು ಮಠ, ಬೆಳಿಗ್ಗೆ ೭ ಘಂಟೆ**

**ನಾನು:** ಸೇಂಟ್ ಜಾನ್ ಆಫ್ ಕ್ರಾಸ್ ಅವರು ಆಧ್ಯಾತ್ಮ ಜೀವನದ 'Dark night of the Soul' (ಆತ್ಮದ ಕಾಳರಾತ್ರಿ) ಬಗ್ಗೆ ಹೇಳಿದ್ದಾರೆ. ಆಧ್ಯಾತ್ಮ ಜೀವನದಲ್ಲಿ ಜಡತ್ವದ ಮಾಯಾ ಜಾಲವನ್ನು ಅನೇಕರು ಅನುಭವಿಸುತ್ತಾರೆ. ಇದರಿಂದ ಹೊರ ಬರುವುದು ಹೇಗೆ?

**ಮಹಾರಾಜ್:** ಒಂದಲ್ಲ ಒಂದು ಸಮಯ ಇಂತಹ ಶುಷ್ಕ ಭಾವ ಮೂಡುವುದು ಸಹಜ. ಸ್ಫೂರ್ತಿ ಕಡಿಮೆಯಾದಾಗ ಅಧ್ಯಾತ್ಮ ಜೀವನದಲ್ಲಿ ಶುಷ್ಕಭಾವವುಂಟಾಗುವುದು. ಸಾಧಕನು ಹತಾಶನಾಗುವನು. ಲಕ್ಷ್ಯವನ್ನು ಗಟ್ಟಿಯಾಗಿ ಹಿಡಿದಿರಬೇಕು. ಸಾಧನೆ-ಭಜನೆಗಳನ್ನೆಂದೂ ಬಿಡಬಾರದು. ಈ ಶುಷ್ಕತೆಯು ಎಷ್ಟು ಸಮಯ ತಾನೆ ಇರುವುದು? ಮನಸ್ಸು ಮತ್ತೆ ಮೇಲೇರು ವುದು. ಭಗವಂತನ ಕೃಪೆಯಿಂದ depression ಹೊರಟು ಹೋಗುತ್ತದೆ. ಸ್ವಂತ ಪ್ರಯತ್ನದಿಂದ ಎಲ್ಲವೂ ಸಾಧ್ಯವಿಲ್ಲ. ಭಗವಂತನ ಕೃಪೆಯಿರಬೇಕು. ಪ್ರಾರಂಭದಲ್ಲಿ ಸ್ವಪ್ರಯತ್ನ ಬಹಳ ಅಗತ್ಯ. ಕೊನೆಯಲ್ಲಿ ಕೇವಲ ಭಗವತ್ಕೃಪೆ. **'ಅಂಗುಷ್ಠ ಮಾತ್ರಃ ಪುರುಷೋಂತರಾತ್ಮಾ ಸದಾ ಜನಾನಾಂ ಹೃದಯೇ ಸನ್ನಿವಿಷ್ಟಃ ತಂ ಸ್ವಾಚ್ಛರೀರಾತ್ ಪ್ರವೃಹೇನ್ಮುಂಜಾದಿವೇಷೀಕಾಂ ಧೈರ್ಯೇಣ।'** – 'ಅಂಗುಷ್ಠ ಪರಿಮಾಣದ ಅಂತರಾತ್ಮನಾದ ಪುರುಷನು ಎಲ್ಲರ ಹೃದಯದಲ್ಲಿ ಸರ್ವದಾ ಇದ್ದಾನೆ. ಮುಂಜ ವೆಂಬ ಹುಲ್ಲಿನಿಂದ ಅದರ ದಂಟನ್ನು ತೆಗೆಯುವಂತೆ ಅವನನ್ನು ಧೈರ್ಯದಿಂದ ಶರೀರದಿಂದ ಬೇರ್ಪಡಿಸಬೇಕು.' *(ಕಠೋಪ ನಿಷದ್ ೨.೬.೧೭).*

**ನಾನು:** ಕೇವಲ ಠಾಕೂರರನ್ನು ಮಾತ್ರವೇ ಪ್ರೀತಿಸುವುದು ಹೇಗೆ? ಈ ಗುಟ್ಟನ್ನು ನಮಗೆ ಹೇಳಿ.

**ಮಹಾರಾಜ್:** ಪ್ರೇಮವು ಪ್ರೇಮವನ್ನು ಹೆಚ್ಚಿಸುತ್ತದೆ. ''ಭಕ್ತ್ಯಾಃ ಸಂಜಾಯತೇ ಭಕ್ತಿಃ'' ಎಂದು ಭಾಗವತದಲ್ಲಿ ಹೇಳಿದೆ. ಇದು ಪ್ರಾರಂಭದಲ್ಲಿ ಸರಿ. ಕಡೆಯಲ್ಲಿ ನೀನು ಸಂಪೂರ್ಣವಾಗಿ ಆತ್ಮಸಮರ್ಪಣೆಯನ್ನು ಮಾಡಲೇಬೇಕು. ಮೊದಲಿಗೆ 'ಅಹಂ ಕಾರ' ಅಗತ್ಯ. ಎಲ್ಲ ದಿಕ್ಕುಗಳಲ್ಲಿ ಹಾರಿ ಸಂಪೂರ್ಣವಾಗಿ ದಣಿದ ಹಕ್ಕಿಯಂತೆ ಹಡಗಿನ ಸ್ತಂಭದ ಮೇಲೆ ಕೂರುವುದು — ಇದೇ ಠಾಕೂರರ ಉಪದೇಶ.

**ನಾನು:** ಕ್ರೈಸ್ತರು ಪ್ರಾರ್ಥನೆಗೆ ಪ್ರಾಮುಖ್ಯತೆ ನೀಡಿದರೆ ನಾವು ವಿಶೇಷವಾಗಿ ಜಪ-ಧ್ಯಾನ ಮಾಡಲು ಹೇಳುತ್ತೇವೆ. ಇವುಗಳಲ್ಲಿರುವ ವ್ಯತ್ಯಾಸವೇನು?

**ಮಹಾರಾಜ್:** ಜಪ ಮಾಡುವಾಗ ಯಾಂತ್ರಿಕವಾಗಿ ನಾಮೋ ಚ್ಚಾರಣೆ ಮಾಡಬಾರದು. ಭಗವಂತನ ಪ್ರಾಪ್ತಿಯೇ ನಿನ್ನ ಗುರಿ. ಆತನನ್ನು ಸ್ಮರಿಸಲು ಪ್ರಯತ್ನಪಡು. ಸತತ ಸ್ಮರಣ-ಮನನವೇ ಜಪದ ಉದ್ದೇಶ. ಭಗವಂತನೊಂದಿಗೆ ಸಂಬಂಧ ಬೆಳೆಸುವುದೇ ಕ್ರೈಸ್ತರ ಪ್ರಾರ್ಥನೆಯ ಉದ್ದೇಶ.

**ನಾನು:** ಠಾಕೂರರು ಹೇಳುತ್ತಾರ, ಭಗವಂತನ ಕಿವಿಗಳು ನಿಮಿರಿರುತ್ತವೆ. ಅವನಿಗೆ ಎಲ್ಲವೂ ಕೇಳಿಸುತ್ತದೆ. ಆದರೆ ನಮ್ಮ ಪ್ರಾರ್ಥನೆ ಒಂದೇ ಮಾರ್ಗದ್ದು ಆಗಿರುತ್ತದೆ. ಆತನಿಗೆ ಕೇಳಿಸು ವುದೆ?

**ಮಹಾರಾಜ್:** ನಮ್ಮ ಹೃದಯಕ್ಕೆ ಭಗವಂತನ ಉತ್ತರ ಕೇಳಿಸುವುದಿಲ್ಲ. ಏಕೆಂದರೆ ನಮ್ಮ ಕಲ್ಲು ಹೃದಯಕ್ಕೆ ಭಗವಂತನ ಕರೆಗೆ ಓಗೊಡುವುದು ಹೇಗೆಂದು ತಿಳಿದಿಲ್ಲ. ಭಗವಂತನು ಕರೆ ದಾಗ ನಮ್ಮ ಮನಸ್ಸು ಸಂಸಾರದಲ್ಲಿ ಮುಳುಗಿರುತ್ತದೆ. ಮನ ಸ್ಸನ್ನು ಅಂಕುಶದಿಂದ ತಿವಿಯಬೇಕು. ಭಗವಂತನಲ್ಲಿ ಆತ್ಮವನ್ನು ಸಮರ್ಪಿಸಬೇಕು.

**೧೦.೮.೧೯೭೭, ಬೇಲೂರು ಮಠ. ಬೆಳಿಗ್ಗೆ ೭ ಗಂಟೆ**

**ನಾನು:** ಬುದ್ಧ ಹಾಗೂ ಏಸುಕ್ರಿಸ್ತನ ಶಿಷ್ಯರ ಕುರಿತು ಅನೇಕ ದಂತಕತೆಗಳು ಸೃಷ್ಟಿಯಾಗಿವೆ. ಭವಿಷ್ಯತ್ತಿನಲ್ಲಿ ಠಾಕೂರರ ಶಿಷ್ಯರ ಬಗ್ಗೆಯೂ ಇದೇ ರೀತಿ ಅನೇಕ ದಂತಕತೆಗಳು ಬೆಳೆದುಕೊಳ್ಳು ತ್ತವೆ. ಈಗ ಸತ್ಯಸಂಗತಿಯನ್ನು ತಿಳಿಯುವುದು ಹೇಗೆ?

**ಮಹಾರಾಜ್:** 'ಯುಕ್ತಿ' ಮತ್ತು ಪರಂಪರೆಗಳಿಂದ ಸತ್ಯ ವೇನೆಂಬುದನ್ನು ಪರಿಷ್ಕರಿಸಿ ನೋಡಬೇಕು. ಪರಂಪರೆ ಎಂದರೆ ಶಾಸ್ತ್ರಗಳು. ಜನರ ಬಾಯಿಯಿಂದ ಕೇಳುವುದು ಅಥವಾ ಮೌಖಿಕ ಪರಂಪರೆ – ಅದನ್ನೂ ಚೆನ್ನಾಗಿ ಪರಿಷ್ಕರಿಸಿ ನೋಡ ಬೇಕು. ಏಕೆಂದರೆ ಒಬ್ಬನ ವಿವರಣೆಗೂ ಮತ್ತೊಬ್ಬನ ವಿವರಣೆಗೂ ವ್ಯತ್ಯಾಸವಿರುತ್ತದೆ. ವೇದಾಂತದಲ್ಲಿ ಶ್ರುತಿ-ಯುಕ್ತಿ-ಅನುಭವ ಗಳಿಂದ ಸತ್ಯವು ನಿರ್ಧರಿಸಲ್ಪಡುತ್ತದೆ. ✽